

# ಇಂಡೋನೇಷ್ಯಾದ ಭಗೀರಥ

■ ಪ್ರವೀಣ ಕುಲಕರ್ಣಿ

ಇಂಡೋನೇಷ್ಯಾದ ಜಾವಾ ದ್ವೀಪದಲ್ಲಿ ಕಳೆದ ಎರಡೂವರೆ ದಶಕಗಳಲ್ಲಿ ಒಂದು ಪವಾಡವೇ ಘಟಿಸಿದೆ. ಅದಕ್ಕೆ ಕಾರಣವಾದ 'ಪವಾಡ ಪುರುಷ'ನಿಗೆ ಈ ಹಿಂದೆ ಹಳ್ಳಿಯ ಜನ ಹುಚ್ಚ ಎಂದು ಹೀಯಾಳಿಸುತ್ತಿದ್ದರು. ಈಗ ಅದೇ ಜನಗಳ ಪಾಲಿಗೆ ಆ ವ್ಯಕ್ತಿ ಹೆಮ್ಮೆಯ 'ಮಾಬಾ' ಅರ್ಥಾತ್ ಅಜ್ಜ. ಎಲ್ಲರ ಪ್ರೀತಿಯ ಆ ಪವಾಡ ಪುರುಷನೇ 69 ವರ್ಷದ ಸ್ಯಾಡಿಮನ್ ಎಂಬ ಕುರಿಗಾಹಿ, ಪರಿಸರ ಕಾರ್ಯಕರ್ತ!

ಜಾವಾದ ಬೋಳು ಗುಡ್ಡವನ್ನು ಕಂಡು ಮರುಗಿದ ಸ್ಯಾಡಿಮನ್ 24 ವರ್ಷಗಳ ಹಿಂದೆ ಸದ್ದಿಲ್ಲದೆ ಆರಂಭಿಸಿದ ಸೇವೆ, ಇಂದು ಎಲ್ಲರೂ ಬೆರಗಿನಿಂದ ತಿರುಗಿ ನೋಡುವಂತೆ ಮಾಡಿದೆ. ಏಕೆಂದರೆ, ಬೆಂಕಿಬಿದ್ದು ಕಾಡೆಲ್ಲ ನಾಶವಾಗಿ ಮರುಭೂಮಿಯಂತೆ ಬೋಳು ಬೋಳಾಗಿದ್ದ ಗುಡ್ಡದ 250 ಎಕರೆ ಪ್ರದೇಶ ಈಗ ಹಸಿರಿನಿಂದ ನಳನಳಿಸುತ್ತಿದೆ. ಬತ್ತಿ ಹೋಗಿದ್ದ ನದಿ–ಸರೋವರಗಳೆಲ್ಲ ಮರುಜೀವ ಪಡೆದಿವೆ. ಹೀಗಾಗಿ ಜಾವಾ ದ್ವೀಪದ ಪಾಲಿಗೆ ಈ ತಾತ ಭಗೀರಥನೇ ಆಗಿದ್ದಾನೆ. ಎರಡೂವರೆ ದಶಕಗಳ ನಂತರವೂ ಸ್ಯಾಡಿಮನ್ ಸೇವೆ ಮುಂದುವರಿದಿದೆ.

ಹೋತದಂತೆ ಬಿಳಿ ಗಡ್ಡದ, ನಕ್ಕರೆ ಅಲ್ಲೊಂದು ಇಲ್ಲೊಂದು ಎರಡು ಹಲ್ಲುಗಳಷ್ಟೇ ಕಾಣುವ ಈ ತಾತ ರೇಂಜರ್ ಹ್ಯಾಟ್, ಸಫಾರಿ ಶರ್ಟ್ ಹಾಕಿಕೊಂಡು ಹೊರಟನೆಂದರೆ ಸಮಯದ ಪರಿವೇ ಇಲ್ಲದಂತೆ ಪರಿಸರದ ಆರೈಕೆ ನಡೆಯಲಿದೆ ಎಂದರ್ಥ.

ಗುಡ್ಡದಲ್ಲಿ ಹನ್ನೊಂದು ಸಾವಿರ ಆಲದ ಮರಗಳನ್ನು ಬೆಳೆಸಿದ ಕೀರ್ತಿ ಸ್ಯಾಡಿಮನ್ ಅವರದು. 'ಆಲದ ಮರಗಳನ್ನು ಬೆಳೆಯದಿದ್ದರೆ ಇಡೀ ಪ್ರದೇಶ ಮರುಭೂಮಿಯಾಗಿ ಪರಿವರ್ತನೆಯಾಗಲಿದೆ ಎಂಬ ಭಯ ನನ್ನನ್ನು ಕಾಡುತ್ತಿತ್ತು. ಆದ್ದರಿಂದಲೇ ನಾನು ಅದರ ಸಸಿಗಳನ್ನು ನೆಟ್ಟು ಬೆಳೆಸಿದೆ. ಆಲದ ಮರಗಳು ನೀರನ್ನು ಹಿಡಿದಿಟ್ಟುಕೊಳ್ಳುತ್ತವೆ ಎನ್ನುವುದು ನಾನು ಅನುಭವದಿಂದ ಕಂಡುಕೊಂಡ ಸತ್ಯ' ಎಂದು ಈ ತಾತ ಹೇಳುತ್ತಾನೆ.

ಆಲದ ಮರಗಳು ಗುಡ್ಡಕ್ಕೆ ಹಸಿರಿನ ಹೊದಿಕೆ ಹೊದಿಸಿದ್ದು ಮಾತ್ರವಲ್ಲದೆ ಭೂಸವಕಳಿಯನ್ನೂ ತಪ್ಪಿಸಿವೆ. ಅಲ್ಲಲ್ಲಿ ನೀರಿನ ಬುಗ್ಗೆಗಳು ಎದ್ದಿವೆ. ಈಗ ಇಲ್ಲಿನ ನೀರನ್ನು ಮನೆ, ಮನೆಗಳಲ್ಲಿ ಕುಡಿಯಲು, ಹೊಲಗಳಿಗೆ ನೀರುಣಿಸಲು ಪಡೆಯಲಾಗುತ್ತಿದೆ. ಮೊದಲು ವರ್ಷಕ್ಕೆ ಒಂದೇ ಬೆಳೆ ತೆಗೆಯುತ್ತಿದ್ದವರು, ಈಗ ಮೂರು ಬೆಳೆ ತೆಗೆಯುತ್ತಿದ್ದಾರೆ. ಅದಕ್ಕೆ ಬೇಕಾದ ನೀರನ್ನು ಸ್ಯಾಡಿಮನ್ ಸೃಷ್ಟಿಸಿದ ಜಲಮೂಲಗಳು ಕೊಡುತ್ತಿವೆ.

'ಎರಡೂವರೆ ದಶಕಗಳ ಹಿಂದೆ ನಾನು ಆಲದ ಬೀಜಗಳನ್ನು ಹಿಡಿದು ಹೊರಟಾಗ ಸುತ್ತಲಿನ ಹಳ್ಳಿಗಳ ಜನ ಅವುಗಳನ್ನು ನೆಡಲು ವಿರೋಧ ವ್ಯಕ್ತಪಡಿಸಿದ್ದರು. ಆಲದ ಮರಗಳು ಪ್ರೇತಗಳ ಬಿಡಾರ. ಅಂತಹ ಮರಗಳನ್ನು ಬೆಳೆಸಲು ನಾವು ಆಸ್ಪದ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ಆದರೆ, ಅಂತರ್ಜಲವನ್ನು ಬರಿದು ಮಾಡಿಕೊಂಡು ಬರಡು ಭೂಮಿ ಇದಾಗಬಾರದು ಎಂಬ ಬಯಕೆಯಿಂದ ನಾನು ಅವರ ಬೆದರಿಕೆಗೆ ಬಗ್ಗಲಿಲ್ಲ' ಎಂದು ಸ್ಯಾಡಿಮನ್ ಸ್ಮರಿಸುತ್ತಾನೆ.

ಆಲಮದ ಮರಗಳು ಮಾತ್ರವಲ್ಲ, ನೂರಾರು ಸಸ್ಯ ಪ್ರಭೇದಗಳು ಅಲ್ಲೀಗ ತಾವು ಪಡೆದುಕೊಂಡಿವೆ. ಅದರ ಬೆನ್ನಹಿಂದೆಯೇ ಪ್ರಾಣಿಸಂಕುಲವೂ ನೆಲೆ ಕಂಡುಕೊಳ್ಳುತ್ತಿದೆ. ಆ ಗುಡ್ಡ ಈಗ ಜೀವವೈವಿಧ್ಯದ ತಾಣವಾಗಿಯೂ ಪರಿವರ್ತನೆ ಆಗುತ್ತಿದೆ.

'ಆಡು ಮೇಯಿಸಲು ಆಲದ ಮರ ಬೆಳೆಸುತ್ತಿದ್ದಾನೆ' ಎಂದು ಈ ಹಿಂದೆ ಗೇಲಿ ಮಾಡಿದ ಜನರೇ ಈಗ ಅಜ್ಜನ ಕೊಡುಗೆಯನ್ನು ಮನಸಾರೆ ಕೊಂಡಾಡುತ್ತಿದ್ದಾರೆ. 'ಮಾಬಾನಿಂದಾಗಿ ಗುಡ್ಡದ ಸುತ್ತಲಿನ ಹಳ್ಳಿಗಳ ಜನ ಶುದ್ಧವಾದ ಕುಡಿಯುವ ನೀರು ಕಾಣುವಂತಾಗಿದೆ. ಹೊಲಗಳಿಗೂ ನೀರು ಹರಿದಿದೆ. ಶುದ್ಧಗಾಳಿಯೂ ಸಿಗುತ್ತಿದೆ' ಎಂದು ಅಭಿಮಾನದಿಂದ ಹೇಳುತ್ತಾರೆ.

ಕಿಕ್ ಆ್ಯಂಡಿ ಹೀರೊ ಹಾಗೂ ಇಂಡೋನೇಷ್ಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿ ಎನಿಸಿದ 'ಕಲ್ಪತರು' ಪುರಸ್ಕಾರ ಈ ತಾತನಿಗೆ ದಕ್ಕಿದೆ. ಅಲ್ಲದೆ, ವೊನೊಗಿರಿ ಪ್ರಾಂತದಲ್ಲಿರುವ ಈ ಹಸಿರಿನ ಗುಡ್ಡ ಈಗ 'ಸ್ಯಾಡಿಮನ್ ಕಾಡು' ಎಂದೇ ಹೆಸರು ಪಡೆದುಕೊಂಡಿದೆ. ಈ ತಾತನ ಕೆಲಸ ನಮ್ಮ ಸಾಲುಮರದ ತಿಮ್ಮಕ್ಕನಂತಹ ನಿಸ್ವಾರ್ಥ ಪರಿಸರ ಕಾರ್ಯಕರ್ತರನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ.

ಇಷ್ಟೆಲ್ಲ ದೊಡ್ಡ ಕಾಡನ್ನು ಬೆಳೆಸಲು, ಅದರ ಸಂರಕ್ಷಣೆಗೆ ಖರ್ಚು ಮಾಡಲು ಹಣ ಎಲ್ಲಿಂದ ಬಂತು ಎನ್ನುವುದು ಪ್ರಶ್ನೆ. ಅದಕ್ಕೆ ಸ್ಯಾಡಿಮನ್ ನೀಡುವ ಉತ್ತರ ಹೀಗಿದೆ: 'ಹಲಸು ಹಾಗೂ ಲವಂಗದ ಸಸಿಗಳ ನರ್ಸರಿ ಮಾಡಿ, ಸಸಿಗಳನ್ನು ಮಾರಾಟ ಮಾಡುತ್ತಿದ್ದೆ. ಬಂದ ಹಣವನ್ನು ಪರಿಸರದ ಕೆಲಸಗಳಿಗೆ ವಿನಿಯೋಗಿಸಿದೆ'.

'ಮುಂದೆ ಎಂದಿಗೂ ಪರಿಸರವನ್ನು ನಮ್ಮ ಜನ ನಾಶ ಮಾಡುವುದಿಲ್ಲ ಎಂಬ ನಂಬಿಕೆ ನನಗಿದೆ. ಹಸಿರಿನಿಂದ ನಳನಳಿಸುತ್ತಿರುವ ಪರಿಸರದಿಂದಾಗಿ ಅವರು ಸುಖ ಸಮೃದ್ಧಿಯಿಂದ ಬಾಳಲಿದ್ದಾರೆ. ನನಗೆ ಇದಕ್ಕಿಂತ ಖುಷಿಯ ಸಂಗತಿ ಬೇರೇನಿದೆ' ಎಂದು ಈ ತಾತ ಕೇಳುತ್ತಾನೆ. ಸಮಾಜಕ್ಕೊಂದು ಅನನ್ಯವಾದ ಕೊಡುಗೆಯನ್ನು ನೀಡಿದ ಹೆಮ್ಮೆ ಆತನ ಮುಖದಲ್ಲಿ ಎದ್ದು ಕಾಣುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65